# ಆಧ್ಯಾತ್ಮಿಕ ಪಥದಲ್ಲಿ ವಿಜ್ಞಾನಿ

ಪ್ರವ್ರಾಜಿಕಾ ಪರಮಪ್ರಾಣಾ

(ಭಾಗ ಎರಡು)

ವಿಜ್ಞಾನಿ ಜಗದೀಶ್‌ಚಂದ್ರ ಬೋಸರನ್ನು (ಜೆ.ಸಿ.ಬೋಸ್) ಬೋಶಿ ತಮ್ಮ ಗುರು ಸದಾನಂದರನ್ನು ಗೌರವಿಸುತ್ತಿದ್ದಂತೆಯೇ ಶ್ರದ್ಧೆಯಿಂದ ಕಾಣುತ್ತಿದ್ದರು. ಡಾ. ಜೆ.ಸಿ ಬೋಸರು ಕೂಡ ಈ ಯುವಕನ ಆಧ್ಯಾತ್ಮಿಕ ಪ್ರವೃತ್ತಿಯನ್ನು ಗುರುತಿಸಿ, ವಿಜ್ಞಾನದ ಶಿಕ್ಷಣದ ಜೊತೆಗೆ ಆತನ ಸ್ವಭಾವ ಚರಿತ್ರೆಗಳ ಉನ್ನತಿಗೂ ಮಾರ್ಗ ದರ್ಶನ ನೀಡುತ್ತಿದ್ದರು. ಜೆ.ಸಿ.ಬೋಸರು ಬೋಶಿಗೆ ಬರೆದ ಒಂದು ಪತ್ರ ಆತನ ಮಾನಸಿಕ ಹಾಗೂ ಬೌದ್ಧಿಕ ಅಭಿವೃದ್ಧಿಗೆ ಅವರು ಕೊಟ್ಟ ಸಲಹೆಗಳಿಂದ ತುಂಬಿದೆ. ಬೋಶಿ ದಿನದ ಬಹು ಭಾಗವನ್ನು ಜೆ.ಸಿ.ಬೋಸರ ಬಳಿ ಕಳೆಯತೊಡಗಿದರು. ''ನಾನು ಅವರ ಕಾರ್ಯದರ್ಶಿಯಾಗಿ, ಸಂಶೋಧನೆಯ ವಿದ್ಯಾರ್ಥಿ ಯಾಗಿ ಅವರೊಡನೆ ಇರಲಾರಂಭಿಸಿದೆ. ಅವರ ಬಟ್ಟೆಗಳನ್ನು ದೋಬಿಗೆ ಕೊಡುವ ಕೆಲಸವನ್ನೂ ಮಾಡುತ್ತಿದ್ದೆ.'' ಎನ್ನುತ್ತಾರೆ ಬೋಶಿ.

ಡಾ. ಜೆ.ಸಿ.ಬೋಸರ ಪ್ರಯೋಗ ಶಾಲೆಯಿಂದ ಹಿಂದಿರುಗಿ ಮನೆಗೆ ಬಂದ ಮೇಲೆ, ಬೋಶಿ ಬಲರಾಮನ ಮನೆಯಲ್ಲಿದ್ದ ಸ್ವಾಮಿ ಬ್ರಹ್ಮಾನಂದರನ್ನು ಕಾಣಲು ಹೋಗುವುದು ದಿನನಿತ್ಯದ ಅಭ್ಯಾಸವಾಗಿತ್ತು. ಕೆಲವೊಮ್ಮೆ ಮನೆಗೆ ಹಿಂತಿರುಗುವಾಗ ರಾತ್ರಿ ಒಂಬತ್ತು ಅಥವಾ ಹತ್ತು ಗಂಟೆಯಾಗಿ ಬಿಡುತ್ತಿತ್ತು. ಆ ಸಂದರ್ಭ ಗಳಲ್ಲಿ ಬೋಶಿ ಆಯಾಸದಿಂದ ಹೇಳುತ್ತಿದ್ದರು, '' ಇಂದು ಮಹಾ ರಾಜರನ್ನು (ಬ್ರಹ್ಮಾನಂದರನ್ನು) ಕಾಣಲು ಹೋಗುವುದಿಲ್ಲ.'' ಆದರೆ ಅವರಿಗೆ ಅರಿವಿಲ್ಲದಂತೆ ಕಾಲುಗಳು ಬಲರಾಮನ ಮನೆ ಯತ್ತ ಓಡುತ್ತಿದ್ದವು. ಮತ್ತೆ ಮನೆಗೆ ಹಿಂತಿರುಗಿದಾಗ ಮನಸ್ಸು ಹಗುರವಾಗಿ ಆನಂದದಿಂದ ತುಂಬಿರುತ್ತಿತ್ತು. ಮಹಾಪುರುಷರ ಸಾನ್ನಿಧ್ಯದ ಬೆಲೆ ಆ ತರುಣ ವಯಸ್ಸಿನಲ್ಲಿಯೇ ಬೋಶಿಗೆ ಚೆನ್ನಾಗಿ ಅರಿವಾಗಿತ್ತು.

ಬೋಸ್ ಸಂಸ್ಥೆಯ ಅತ್ಯಂತ ದಕ್ಷ ವಿದ್ಯಾರ್ಥಿ ಎಂದು ಬೋಶಿ ಹೆಸರು ಪಡೆದರು. ಜಟಿಲವಾದ ಹಾಗೂ ಅತ್ಯಂತ ಸಹನೆಯಿಂದ ನಡೆಸಬೇಕಾದ ಸಂಶೋಧನೆಗಳನ್ನು ಜೆ.ಸಿ.ಬೋಸ್‌ರು ಬೋಶಿಗೇ ಒಪ್ಪಿಸುತ್ತಿದ್ದರು. ಒಮ್ಮೆ ಡಾ. ಜೆ.ಸಿ.ಬೋಸರು ಸಸ್ಯ ಒಂದರ ಸಣ್ಣ ಎಲೆಯಲ್ಲಿ ಕಂಡುಬರುವ ಜೀವದ ಸ್ಪಂದನವನ್ನು ಅಧ್ಯಯನ ಮಾಡಿ ವರದಿ ಒಪ್ಪಿಸುವಂತೆ ಬೋಶಿಗೆ ಹೇಳಿದರು. ಈ ಪ್ರಯೋಗ ಕ್ಕಾಗಿ ಜೆ.ಸಿ.ಬೋಸರು ತಾವೇ ಒಂದು ಯಂತ್ರವನ್ನು ಕಂಡು ಹಿಡಿದಿದ್ದರು. ಈ ಯಂತ್ರದಲ್ಲಿ ಅಳವಡಿಸಿದ್ದ ಒಂದು ಸೂಕ್ಷ್ಮ ಸೂಜಿ, ಯಂತ್ರದಲ್ಲಿ ಅಳವಡಿಸಿದ್ದ ಹೊಗೆಯಿಂದ ಕಪ್ಪು ಮಾಡಿದ್ದ



(Smoked Glass) ಒಂದು ಗಾಜಿನ ಮೇಲೆ ಸಣ್ಣ ಸಣ್ಣ ಚುಕ್ಕಿ ಗಳನ್ನು ಇಡುವುದರ ಮೂಲಕ ಸಸ್ಯಗಳಲ್ಲಿ ಉತ್ಪನ್ನವಾಗುತ್ತಿದ್ದ ಸ್ಪಂದನದ ಏರಿಳಿತವನ್ನು ದಾಖಲು ಮಾಡುತ್ತಿತ್ತು. ಒಂದು ಸಣ್ಣ ಎಲೆಯಲ್ಲಿ ಅತ್ಯಂತ ಸೂಕ್ಷ್ಮವಾಗಿ ಏಳುತ್ತಿದ್ದ ಸ್ಪಂದನವನ್ನು ಅಧ್ಯ ಯನ ಮಾಡಲು ಬೋಶಿಗೆ ಪ್ರತಿ ನಾಲ್ಕು ಗಂಟೆಗಳಿಗೊಮ್ಮೆ Smoked Glass ಬದಲಿಸಬೇಕಾಗಿತ್ತು. ಈ ಪ್ರಯೋಗವನ್ನು ಡಾ. ಜೆ.ಸಿ. ಬೋಸರ ಮನೆಯ ಎರಡನೆಯ ಅಂತಸ್ತಿನಲ್ಲಿರುವ ವಿಶಾಲವಾದ ಕೋಣೆಯಲ್ಲಿ ನಡೆಸಲಾಯಿತು. ಸಾಧಾರಣವಾಗಿ ಕೆಲವೇ ಗಂಟೆಗಳಲ್ಲಿ ಈ ಸಣ್ಣ ಎಲೆಯ ಜೀವದ ತುಡಿತ ನಿಂತು ಹೋಗಬೇಕಾಗಿತ್ತು. ಆದರೆ ಆ ದಿನ ಬೋಶಿಯ ದುರದೃಷ್ಟದಿಂದ ಹಾಗಾಗಲಿಲ್ಲ. ಇಡೀ ರಾತ್ರಿ ಯಾವ ರೀತಿಯ ಏರಿಳಿತಗಳಿಲ್ಲದೆ ಸಮಾನವಾದ ಚುಕ್ಕೆಗಳು ಗಾಜಿನ ಮೇಲೆ ಮೂಡಿಬಂದವು. ಬೆಳಿಗ್ಗೆ ೫ ಗಂಟೆಯ ಹೊತ್ತಿಗೆ ಎಲೆಗಳು ಸ್ವಲ್ಪ ಮುದುರಿದಂತಾ ದವು. ಆರು ಗಂಟೆಗೆ ಅದರಿಂದ ಹೊರಹೊಮ್ಮುತ್ತಿದ್ದ ಸ್ಪಂದನ ಸಂಪೂರ್ಣವಾಗಿ ನಿಂತುಹೋಯಿತು. ಆ ಸಮಯಕ್ಕೆ ಸರಿಯಾಗಿ ಒಳಗೆ ಬಂದ ಜೆ.ಸಿ. ಬೋಸರು ಗಾಜುಗಳನ್ನು ಪರೀಕ್ಷಿಸಿ ನೋಡಿ ಅತ್ಯಂತ ಆನಂದದಿಂದ ಹೇಳಿದರು: ''ತುಂಬಾ ಚೆನ್ನಾಗಿ ಕೆಲಸ ಮಾಡಿದೆ ಬೋಶಿ, ಈಗ ಮತ್ತೆ ಈ ಎಲೆಗೆ ಜೀವ ತುಂಬಲು ಸಾಧ್ಯವೇ ನೋಡೋಣ.'' ಬೋಶಿ ಕೆಲವು ರಸಾಯನಗಳನ್ನು ಹಾಕಿ ಎಲೆ ಮತ್ತೆ ಜೀವಂತವಾಗುವಂತೆ ಮಾಡಿದರು. ಮೊದಲಿ ಗಿಂತ ಹೆಚ್ಚಾಗಿ ಎಲೆಯಲ್ಲಿ ಪ್ರಾಣದ ಸ್ಪಂದನ ಕಾಣಿಸಿಕೊಂಡಿತು.

ಈ ರೀತಿ ಸುಮಾರು ೩೭ ಗಂಟೆ ಕಾಲ ಬೋಶಿ ಸೂಕ್ಷ್ಮದರ್ಶನ ಯಂತ್ರದಿಂದ ಆ ಸಸ್ಯವನ್ನು ಪರೀಕ್ಷಿಸಿದರು. ಸಂಜೆಯ ಹೊತ್ತಿಗೆ ಬೋಶಿಗೆ ವಿಶ್ರಾಂತಿ ಕೊಟ್ಟು ಆ ಸಸ್ಯ ಕೊನೆಯುಸಿರೆಳೆಯಿತು.

ಸಸ್ಯಗಳಲ್ಲಿ ಪ್ರಾಣವಿರುವ ಬಗ್ಗೆ ಬೋಸ್‌ರವರು ನಡೆಸಿದ ಸಂಶೋಧನೆಯ ಸತ್ಯತೆಯ ಬಗ್ಗೆ ಪಾಶ್ಚಾತ್ಯ ವಿಜ್ಞಾನಿಗಳು ಸಂದೇಹ ವ್ಯಕ್ತಪಡಿಸಿದ್ದರು. ಇದೆಲ್ಲ ಭಾರತೀಯರ ಕಲ್ಪನೆಯೆಂದೇ ಅನೇಕರ ಅಭಿಪ್ರಾಯವಾಗಿತ್ತು. ೧೯೧೪ರಲ್ಲಿ ಭಾರತದ ಸರ್ಕಾರ ಜೆ.ಸಿ.ಬೋಸರಿಗೆ ಇಂಗ್ಲೆಂಡ್ ಹಾಗೂ ಯೂರೋಪಿಗೆ ಹೋಗಿ, ತಮ್ಮ ಸಂಶೋಧನೆಯನ್ನು ಅಲ್ಲಿಯ ವಿಜ್ಞಾನಿಗಳೆದುರು ಪ್ರಮಾಣ ಮಾಡಿ ತೋರಿಸಲು ಹೇಳಿತು. ಈ ಮಹತ್ವಪೂರ್ಣ ಪ್ರಯಾಣದಲ್ಲಿ ಜೆ.ಸಿ. ಬೋಸ್ ತಮ್ಮ ಎಲ್ಲಾ ವಿದ್ಯಾರ್ಥಿಗಳ ನಡುವೆ ಬೋಶಿ ಯನ್ನೇ ಸಹಾಯಕರನಾಗಿ ಆರಿಸಿಕೊಂಡರು. ಪ್ರಯೋಗ ಮಾಡಿ ತೋರಿಸಲು ಆಯಾ ದೇಶಗಳಲ್ಲಿ ಸಿಗುವ ಸಸ್ಯಗಳ ಬದಲು, ತಾವು ಯಾವಾಗಲೂ ಸಂಶೋಧನೆಗೆ ಬಳಸುತ್ತಿದ್ದ ಸಸ್ಯಗಳನ್ನೇ ತೆಗೆದುಕೊಂಡು ಬೋಶಿ ಹೊರಡಲು ಸಿದ್ಧರಾದರು.

ಲಂಡನ್ನಿನ ರಾಯಲ್ ಇನ್‌ಸ್ಟಿಟ್ಯೂಟ್, ಕೇಂಬ್ರಿಡ್ಜ್, ವಿಯನ್ನಾ, ಪ್ಯಾರೀಸ್ ಮುಂತಾದ ಎಲ್ಲಾ ಜಾಗಗಳಲ್ಲಿಯೂ ವಿಜ್ಞಾನಿಗಳಷ್ಟೇ ಅಲ್ಲ , ಸಮಾಜದ ಎಲ್ಲಾ ಸ್ತರದ ವ್ಯಕ್ತಿಗಳು ಇವ ರನ್ನು ಕಾಣುವ ಹಾಗೂ ಪ್ರಯೋಗಗಳನ್ನು ನೋಡುವ ಕುತೂ ಹಲದಿಂದ ಬಹು ಸಂಖ್ಯೆಯಲ್ಲಿ ಬಂದಿದ್ದರು. ವಿದ್ಯುತ್ತಿನ ಸ್ಪರ್ಶ ವಾದಾಗ ಅಥವಾ ಯಾವುದಾದರೂ ರಾಸಾಯನಿಕ ಪದಾರ್ಥ, ಆಲ್ಕೋಹಾಲ್ ಮುಂತಾದವುಗಳನ್ನು ಸುರಿದಾಗ ಸಸ್ಯಗಳಲ್ಲಿ ಉಂಟಾಗುವ ಪ್ರತಿಕ್ರಿಯೆಯನ್ನು ಪರದೆಯ ಮೇಲೆ ಪ್ರೊಜೆಕ್ಟರಿನ ಮೂಲಕ ತೋರಿಸಲಾಗುತ್ತಿತ್ತು. ಸಸ್ಯಗಳು ನೋವಿನಿಂದ ನಲುಗು ವುದು, ಸುಸ್ತಾಗಿ ತಮ್ಮ ತೇಜಸ್ಸನ್ನು ಕಳೆದುಕೊಳ್ಳುವುದು ಮುಂತಾದ ಪ್ರತಿಕ್ರಿಯೆಗಳು ಚುಕ್ಕೆಗಳ ಏರು ಪೇರಿನ ಮೂಲಕ ಪರದೆಯ ಮೇಲೆ ಮೂಡಿಬರುತ್ತಿತ್ತು. ಬೋಶಿಗೆ ಲಂಡನ್ನಿನಲ್ಲಿ ಬಹಳ ಜನ ವಿಶಿಷ್ಟ ವ್ಯಕ್ತಿಗಳೊಂದಿಗೆ ಪರಿಚಯವಾಯಿತು. ಒಮ್ಮೆ ಅತ್ಯಂತ ಹೆಸರುವಾಸಿಯಾದ ಸಾಹಿತಿ ಬರ್ನಾರ್ಡ್ ಶಾ ಜೆ.ಸಿ. ಬೋಸರ ಸಭೆಗೆ ಬಂದರು. ತಾವು ಸಸ್ಯಾಹಾರಿ ಎಂದು ಗರ್ವ ಪಟ್ಟುಕೊಳ್ಳುತ್ತಿದ್ದ ಅವರು, ತಾವು ಹೋದ ಸಭೆ, ಸಮಾರಂಭ ಗಳಲ್ಲಿ ಮಾಂಸಾಹಾರಿಗಳನ್ನು ಟೀಕಿಸುವ ಅವಕಾಶವನ್ನು ಬಿಡು ತ್ತಿರಲಿಲ್ಲ. ಅವರ ಹರಿತವಾದ ಮಾತುಗಳು ಉಳಿದವರ ವಾದ, ಯುಕ್ತಿಗಳು ನೆಲಕಚ್ಚುವಂತೆ ಮಾಡುತ್ತಿತ್ತು. ಇಂಥ ಬರ್ನಾರ್ಡ್ ಶಾರವರು ಡಾ. ಜೆ.ಸಿ.ಬೋಸ್ ಮತ್ತು ಬೋಶಿಯವರು ತೋರಿ ಸಿದ ಒಂದು ಪ್ರಯೋಗವನ್ನು ಕಂಡು ದಿಗ್ಭ್ರಾಂತರಾದರು. ಯಂತ್ರದಲ್ಲಿ ಇಟ್ಟಿದ್ದ ಎಲೆಕೋಸಿನ ಜೀವಂತವಾಗಿ ನಳನಳಿಸುವ ಎಲೆಯ ಮೇಲೆ ಬೋಶಿ ಬಿಸಿನೀರನ್ನು ಹಾಕಿದಾಗ ಅದು ನೋವಿ ನಿಂದ ಮುದುರಿ ಹೋದುದು, ಹಾಗೂ ಅದರ ಜೀವದ ಸ್ಪಂದನ ದಲ್ಲಾದ ಏರುಪೇರುಗಳನ್ನು ಬೋಸರ ಯಂತ್ರದ ಮೂಲಕ ವೀಕ್ಷಿಸಿದ ಬರ್ನಾರ್ಡ್ ಶಾರವರು ತಮ್ಮ ಜೀವನದಲ್ಲಿ ಮೊದಲ ಬಾರಿ ಮಾತಿಲ್ಲದೆ ಸ್ತಂಭಿತರಾಗಿ ಕುಳಿತರು. ಅವರ ಪತ್ನಿ ನಂತರ ಬೋಶಿಗೆ ಹೇಳಿದ್ದರು. ''ಇಷ್ಟು ವರ್ಷಗಳಲ್ಲಿ ಈ ಒಂದೇ ಸಂದರ್ಭದಲ್ಲಿ ಅವರು ಪೆಚ್ಚಾಗಿ, ಮೂಕರಾಗಿ ಕುಳಿತಿದ್ದುದನ್ನು ನೋಡಿದೆ!''

ಈ ಎಲ್ಲಾ ದೇಶಗಳಲ್ಲಿ ಅತ್ಯಂತ ವಿದ್ಯಾವಂತ, ಸುಸಂಸ್ಕೃತ ಪ್ರೇಕ್ಷಕರನ್ನು ಎದುರಿಸಿ ನಿಲ್ಲುವಾಗ ಆರಂಭದಲ್ಲಿ ಬೋಶಿ ಸ್ವಲ್ಪ ಭಯಪಟ್ಟಿದ್ದರು. ತಮ್ಮ ಪ್ರಯೋಗ, ವಿವರಣೆಗಳು ಸರಿಯಾ ಗಿಯೇ ಇದ್ದರೂ ಈ ದೇಶಗಳ ಹೊಸ ಹವಾಮಾನದಲ್ಲಿ ತಾವು ಭಾರತದಿಂದ ತಂದ ಸಸ್ಯಗಳು ಹೇಗೆ ಪ್ರತಿಕ್ರಿಯೆ ತೋರಿಸ ಬಲ್ಲವೋ ಎಂಬ ಚಿಂತೆ ಅವರನ್ನು ಕಾಡುತ್ತಿತ್ತು. ಇಂಥ ಸಮಯ ಗಳಲ್ಲಿ ಭಗವದ್ಗೀತೆಯ '**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ**' (ಕರ್ಮ ಮಾಡಲು ಮಾತ್ರ ನಿನಗೆ ಅಧಿಕಾರ, ಅದರ ಫಲದತ್ತ ಎಂದೂ ಮನಸ್ಸಿಡಬೇಡ) ಎಂಬ ಶ್ಲೋಕವನ್ನು ನೆನಪಿಸಿ ಕೊಂಡು ಬೋಶಿ ತಮ್ಮ ಮನಸ್ಸನ್ನು ಶಾಂತಗೊಳಿಸುತ್ತಿದ್ದರು.

ತಮ್ಮ ಉದ್ದೇಶವನ್ನು ಸಾಧಿಸಲು ಪ್ರಾಣವನ್ನೂ ಮುಡಿಪಾಗಿ ಡಲು ಬೋಶಿ ಸಿದ್ಧರಾಗಿದ್ದರೆಂಬುದು ಮತ್ತೊಂದು ಘಟನೆ ಯಿಂದ ತಿಳಿದು ಬರುತ್ತದೆ. ಪ್ಯಾರಿಸಿನ ಒಂದು ವಿಶ್ವವಿದ್ಯಾಲಯ ದಲ್ಲಿ ತಮ್ಮ ಸಂಶೋಧನೆಯನ್ನು ತೋರಿಸಲು ಹೋಗಿದ್ದಾಗ ಡಾ. ಜೆ.ಸಿ.ಬೋಸರು ಅಲ್ಲಿ ನೆರೆದ ವಿದ್ಯಾರ್ಥಿಗಳು ಮತ್ತು ಅಧ್ಯಾ ಪಕರೆದುರಿಗೆ ಹೇಳಿದರು, ''ನಾವೀಗ ಒಂದು ಜೀವಂತ ಸಸ್ಯವನ್ನು ಸೈನೈಡ್ (cynide) ದ್ರಾವಣದಲ್ಲಿ ಹಾಕುತ್ತೇವೆ. ಆಗ ಅದರಲ್ಲಾ ಗುವ ಪ್ರತಿಕ್ರಿಯೆಯನ್ನು ನೀವು ಪರದೆಯ ಮೇಲೆ ಮೂಡುವ ಚಿಹ್ನೆಗಳ ಏರುಪೇರುಗಳನ್ನು ಗಮನಿಸಿ ತಿಳಿಯಬಹುದು.'' ನಂತರ ಈ ಪ್ರಯೋಗವನ್ನು ಪ್ರೇಕ್ಷಕರೆದುರಿಗೆ ಮಾಡುವಂತೆ ಬೋಶಿಗೆ ಹೇಳಿದರು. ಈ ಪೊಟಾಶಿಯಂ ಸೈನೈಡ್ ಎಂಬ ರಸಾ ಯನ ಒಂದು ಭಯಾನಕವಾದ ವಿಷ. ಬೋಶಿ ಅದನ್ನು ಆ ಗಿಡದ ಮೇಲೆ ಸುರಿದರು. ಅದುವರೆಗೂ ಆ ಗಿಡವನ್ನಿಟ್ಟಿದ್ದ ಯಂತ್ರ ಪರದೆಯ ಮೇಲೆ ಸಮಾನವಾದ ಚುಕ್ಕೆಗಳನ್ನು ತೋರಿಸುತ್ತಿತ್ತು. ಈಗ ವಿಷದ ಪರಿಣಾಮದಿಂದ ಅದರಲ್ಲಿ ಉಂಟಾಗುವ ಪ್ರತಿ ಕ್ರಿಯೆ ಚುಕ್ಕೆಗಳ ಏರುಪೇರುಗಳಿಂದ ಕಂಡುಬರಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಆ ಗಿಡ ಮೊದಲಿನಂತೆಯೇ ಸಮಾನವಾದ ಪ್ರತಿಕ್ರಿಯೆಯನ್ನು ತೋರಿಸುತ್ತಾ ಬಂದಿತು. ವಿಷದ ಸಂಸ್ಪರ್ಶ ದಿಂದ ಗಿಡ ಪಡುವ ಕಷ್ಟ ಹಾಗೂ ತನ್ನ ಜೀವಶಕ್ತಿಯನ್ನು ಕಳೆದು ಕೊಳ್ಳುವುದನ್ನು ಸೂಚಿಸುವಂತಹ ಯಾವ ಪ್ರತಿಕ್ರಿಯೆಯೂ ಅದ ರಲ್ಲಿ ಕಂಡುಬರಲಿಲ್ಲ! ಬೋಶಿ ಗಾಬರಿಯಾದರು. ತಮ್ಮ ಕೈಯ ಲ್ಲಿರುವ ಬಿಳಿಯ ಪುಡಿ ಪೊಟಾಶಿಯಂ ಸೈನೈಡ್ ತಾನೆ?! ಅವರಿಗೆ ಸಂಶಯ ಬಂದಿತು. ಪರೀಕ್ಷಿಸಿ ನೋಡಲು ಸ್ವಲ್ಪ ಪುಡಿಯನ್ನು ನಾಲಿಗೆ ಮೇಲೆ ಹಾಕಿಕೊಂಡರು. ಅದು ಸಕ್ಕರೆಯಂತೆ ಸಿಹಿಯಾಗಿ ನಾಲಿಗೆ ಮೇಲೆ ಕರಗಿಹೋಯಿತು. ಅದೇನಾದರೂ ಸೈನೈಡ್ ಆಗಿ

ದ್ದರೆ ಅದನ್ನು ಹೇಳಲು ಬೋಶಿ ಬದುಕಿರುತ್ತಿರಲಿಲ್ಲ. ಪ್ಯಾರಿಸಿನಲ್ಲಿ ಜೆ.ಸಿ.ಬೋಸ್ ಮತ್ತು ಬೋಶಿ ಇಳಿದುಕೊಂಡಿದ್ದ ಮನೆಯ ಒಬ್ಬಳು ಹುಡುಗಿಗೆ ಸೈನೈಡನ್ನು ಕೊಂಡು ತರುವಂತೆ ಬೋಶಿ ಹೇಳಿದ್ದರು. ಆ ಹುಡುಗಿ ಔಷಧದ ಅಂಗಡಿಗೆ ಹೋಗಿ ಸೈನೈಡ್ ಕೊಡುವಂತೆ ಕೇಳಿದಳು. ಇದೊಂದು ಅಪಾಯಕಾರಿಯಾದ ವಿಷ ವಾದ್ದರಿಂದ ಅಂಗಡಿಯವನು, ಆ ಹುಡುಗಿ ಯಾರನ್ನೋ ಪ್ರೀತಿಸಿ ವಿಫಲಳಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟಿದ್ದಾಳೆಂದು ಊಹಿಸಿ, ಅವಳಿಗೆ ಸಕ್ಕರೆ ಪುಡಿಯನ್ನು ಪೊಟ್ಟಣ ಕಟ್ಟಿ ಕೊಟ್ಟಿದ್ದನು. ಅಂಗಡಿಯಲ್ಲಿ ವಸ್ತು ಅದಲು ಬದಲಾಗಿ, ಸಕ್ಕರೆ ಪೊಟ್ಟಣ ತಮಗೆ ಸಿಕ್ಕಿರಬೇಕೆಂದು ಊಹಿಸಿದ ಬೋಶಿ, ಕೂಡಲೇ ತಮ್ಮ ಬುದ್ಧಿ ಯನ್ನು ಓಡಿಸಿ ಆಲ್ಕೋಹಾಲನ್ನು ಸುರಿದು, ಸಸ್ಯವು ಸಾಯುವಂತೆ ಮಾಡಿ, ತಮ್ಮ ಪ್ರಯೋಗವನ್ನು ಸಫಲಗೊಳಿಸಿದರು.

ಜೆ.ಸಿ.ಬೋಸ್ ಮತ್ತು ಬೋಶಿ ಇವರ ಇಂಗ್ಲೆಂಡ್ ಹಾಗೂ ಯೂರೋಪಿನ ಪ್ರಯಾಣ ಯಶಸ್ವಿಯಾಗಿ ಮುಕ್ತಾಯ ಗೊಂಡಿತು.

೧೯೧೭ರಲ್ಲಿ ಜೆ.ಸಿ.ಬೋಸ್‌ರ ವೈಜ್ಞಾನಿಕ ಸಂಶೋಧನೆಯ ಸಂಸ್ಥೆ ಸ್ಥಾಪಿತವಾಯಿತು. ಭಾರತದಲ್ಲಿ ಆಗ ಬ್ರಿಟಿಷರ ಆಡಳಿತ; ಮೇಧಾವಿಗಳೂ, ಪರಿಶ್ರಮಿಗಳೂ ಆದ ಭಾರತೀಯ ವಿಜ್ಞಾನಿ ಗಳು ಅವಹೇಳನಕ್ಕೆ ಗುರಿಯಾಗಿದ್ದರು. ಇಂಥ ಸಂದರ್ಭದಲ್ಲಿ ಸೋದರಿ ನಿವೇದಿತಾ (ಮಾರ್ಗರೆಟ್ ನೊಬಲ್) ಪರಿಪೂರ್ಣ ವಾಗಿ ಜೆ.ಸಿ.ಬೋಸರಿಗೆ ಬೆಂಬಲಿಗರಾಗಿ ನಿಂತಿದ್ದರು. ಡಾ. ಜೆ.ಸಿ. ಬೋಸರ ವೈಜ್ಞಾನಿಕ ಪ್ರತಿಭೆ ನಿವೇದಿತಾರನ್ನು ಮಂತ್ರಮುಗ್ಧ ರನ್ನಾಗಿ ಮಾಡಿತ್ತು. ಪಾಶ್ಚಾತ್ಯ ವಿಜ್ಞಾನಿಗಳೂ ನಾನಾ ರೀತಿಯ ಪ್ರಯೋಗಗಳ ಮೂಲಕ ಹೊಸ ತತ್ತ್ವಗಳನ್ನು ಅನ್ವೇಷಿಸಿ ಪ್ರತಿ ಪಾದಿಸುತ್ತಿದ್ದಾರೆ ನಿಜ. ಆದರೆ ಡಾ. ಜೆ.ಸಿ.ಬೋಸ್‌ರ ವೈಜ್ಞಾನಿಕ ದೃಷ್ಟಿಕೋನ ಇದಕ್ಕಿಂತ ಹೊಸದಾದದ್ದು; ಭಾರತದ ಸನಾತನ ಆಧ್ಯಾತ್ಮಿಕ ತತ್ತ್ವದ ತಳಪಾಯದ ಮೇಲೆ ಪ್ರತಿಷ್ಠಿತವಾದದ್ದು ಎಂದು ಸಿಸ್ಟರ್ ನಿವೇದಿತಾರಿಗೆ ಗೋಚರವಾಗಿತ್ತು. ಈ ಚರಾಚರ ವಿಶ್ವಬ್ರಹ್ಮಾಂಡ ಚೈತನ್ಯಮಯವಾದದ್ದು. ಪ್ರಕೃತಿಯಲ್ಲಿ ನಮ್ಮ ಕಣ್ಣೆದುರಿಗಿರುವ ಎಲ್ಲಾ ರೀತಿಯ ಜೀವಂತ ಅಥವಾ ಜಡ ವಸ್ತು ಗಳೂ ಒಂದೇ ಪ್ರಾಣದ ಶಕ್ತಿಯಿಂದ ತುಂಬಿವೆ. '**ಯದಿದಂ ಕಿಂಚ ಜಗತ್ ಸರ್ವಂ ಪ್ರಾಣ ಏಜತಿ ನಿಃಸೃತಂ**' ಈ ತತ್ತ್ವದ ಮೇಲೆ ಬೋಸರ ವೈಜ್ಞಾನಿಕ ತತ್ತ್ವ ಪ್ರತಿಷ್ಠಿತವಾಗಿದೆ. ವೈಜ್ಞಾನಿಕ ಸಂಶೋ ಧನೆಯ ಕ್ಷೇತ್ರದಲ್ಲಿ ಡಾ. ಬೋಸ್ ಪ್ರತಿ ಹೆಜ್ಜೆಗೂ ಬಾಧೆ, ವಿಘ್ನ ಗಳನ್ನು ಎದುರಿಸಬೇಕಾಯಿತು. ಇದನ್ನು ಕಂಡ ನಿವೇದಿತಾಳಲ್ಲಿ ದುಃಖ, ಕ್ರೋಧಗಳ ಪ್ರತಿಕ್ರಿಯೆ ಎದ್ದಿತು. ಭಾರತ ಸ್ವಾತಂತ್ರ್ಯ ವನ್ನು ಪಡೆಯದಿದ್ದರೆ ಇಲ್ಲಿಯ ಮೇಧಾವಿಗಳೂ, ವಿಜ್ಞಾನಿಗಳೂ ಯಾವುದೇ ರೀತಿಯಲ್ಲಿಯೂ ಮುಂದುವರೆಯಲು ಸಾಧ್ಯವಿಲ್ಲ ಎನ್ನುವುದು ಅವರಿಗೆ ಮತ್ತೂ ಸ್ಪಷ್ಟವಾಯಿತು. ಭಾರತದ ಅದ್ವೈತ ತತ್ತ್ವವು ವಿಜ್ಞಾನದ ಮೂಲಕವಾಗಿ ಮತ್ತೆ ಪ್ರಮಾಣಿತವಾಗಿ ಪ್ರತಿಷ್ಠೆಯನ್ನು ಪಡೆಯುತ್ತದೆ. ಈಗ ಹಿಂದೆ ಬಿದ್ದಿರುವ ಭಾರತ ವಿಜ್ಞಾನದ ಅಧ್ಯಯನದ ಮೂಲಕವೇ ಮೇಲಕ್ಕೆ ಬರಬೇಕು ಎನ್ನು ವುದು ಸಿಸ್ಟರ್ ನಿವೇದಿತಾರ ದೃಢವಾದ ಅಭಿಪ್ರಾಯವಾಗಿತ್ತು. ಡಾ. ಜೆ.ಸಿ. ಬೋಸ್ ಬರೆದ – 'Living and Nonliving', 'Plant Response', 'Comparative Electro Physio logy' ಹಾಗೂ 'Irritability of Plants' ಇತ್ಯಾದಿ ಪುಸ್ತಕ ಹಾಗೂ ಪ್ರಬಂಧಗಳನ್ನು ತಿದ್ದಿ ಪ್ರಕಟಣೆ ಮಾಡುವ ಕೆಲಸಕ್ಕೆ ನಿವೇ ದಿತಾ ಸಹಾಯ ಮಾಡಿದ್ದರು. ಆ ಸಮಯದಲ್ಲಿ ಡಾ. ಜೆ.ಸಿ. ಬೋಸ್ ಪ್ರತಿದಿನ ಬಾಗ್‌ಬಜಾರಿನ ನಿವೇದಿತಾ ಶಾಲೆಗೆ ಭೇಟಿ ಕೊಡುತ್ತಿದ್ದರು. ಮುಂದೆ ತರುಣ ಬೋಶಿಯಲ್ಲಿ ಪ್ರಖರವಾದ ವೈಜ್ಞಾನಿಕ ಬುದ್ಧಿಯನ್ನು ಗುರುತಿಸಿದ ನಿವೇದಿತಾ ಆತನಿಗೂ ಬೆಂಬಲಿಗರಾಗಿ ನಿಂತರು. ಸೋದರಿ ನಿವೇದಿತಾ ೧೯೧೧ ರಲ್ಲಿ ದಾರ್ಜಿಲಿಂಗಿನಲ್ಲಿ ತೀರಿಕೊಂಡರು. ಡಾ. ಜೆ.ಸಿ. ಬೋಸರ ಇಚ್ಛೆ ಯಂತೆ ಬೋಶಿ ನಿವೇದಿತಾರ ಅಸ್ಥಿಯ ಸಣ್ಣ ಅಂಶವನ್ನು ತಂದು ಕೊಟ್ಟರು. ಇದನ್ನು ಮುಂದೆ ಬೋಸ್ ಇನ್‌ಸ್ಟಿಟ್ಯೂಟಿನ ಹೊಸ ಕಟ್ಟಡದಲ್ಲಿ ಸಂರಕ್ಷಿಸಿ ಇಡಲಾಯಿತು.

ಒಮ್ಮೆ ಸ್ವಾಮಿ ಬ್ರಹ್ಮಾನಂದರು ಬೋಸ್ ಇನ್‌ಸ್ಟಿಟ್ಯೂಟಿಗೆ ಭೇಟಿ ನೀಡಿದರು. ತುಂಬ ಆಸಕ್ತಿಯಿಂದ ಪ್ರಯೋಗಗಳನ್ನು ನೋಡಿದರು. ಆ ದಿನ ಸಂಜೆ ಬೋಶಿ ಅವರನ್ನು ಕಾಣಲು ಹೋಗಿ ದ್ದಾಗ, ಅಲ್ಲಿ ನೆರೆದ ಇತರ ಜನರೆದುರಿಗೆ ಸ್ವಾಮಿ ಬ್ರಹ್ಮಾನಂದರು ಅಂದು ತಾವು ಬೋಸ್ ವೈಜ್ಞಾನಿಕ ಸಂಸ್ಥೆಗೆ ಭೇಟಿ ನೀಡಿದ ವಿಚಾರ ವನ್ನು ತಿಳಿಸುತ್ತಾ ಹೇಳಿದರು, ''ಶ್ರೀರಾಮಕೃಷ್ಣರಿಗೊಮ್ಮೆ ಎಂಥ ಅವಸ್ಥೆ ಬಂದಿತ್ತೆಂದರೆ, ಹುಲ್ಲಿನ ಮೇಲೆ ಕಾಲಿಟ್ಟು ನಡೆಯಲು ಅವರಿಗೆ ಆಗುತ್ತಿರಲಿಲ್ಲ. ಹಾರಿ ಹಾರಿ ಹುಲ್ಲಿಲ್ಲದ ಜಾಗದಲ್ಲಿ ಕಾಲಿಟ್ಟು ನಡೆಯುತ್ತಿದ್ದರು. ಹುಲ್ಲಿನಲ್ಲಿಯೂ ಜೀವವಿರಬೇಕೆಂಬ ಅರಿವೇ ನಮಗೆ ಇರಲಿಲ್ಲ. ಈ ದಿನ ಬೆಳಿಗ್ಗೆ ಜೆ.ಸಿ. ಬೋಸ್‌ರ ಪ್ರಯೋಗಗಳನ್ನು ಕಂಡ ಮೇಲೆ ಶ್ರೀರಾಮಕೃಷ್ಣರ ಗ್ರಹಣಶಕ್ತಿ ಎಂಥ ಸೂಕ್ಷ್ಮವಾಗಿತ್ತೆಂದು ನನಗೆ ಅರ್ಥವಾಯಿತು'' ಎಂದು ಅವರು ಬೋಶಿಯತ್ತ ತಿರುಗಿ ಹೇಳಿದರು, ''ಬೋಶಿ ವಿಜ್ಞಾನ ವನ್ನು ಬಿಡಬೇಡ, ಇನ್ನೂ ಮುಂದುವರಿ.'' ನಂತರ ಮತ್ತೆ ಅವ ನನ್ನು ಕೇಳಿದರು, ''ಬೋಶಿ, ಸತ್ತ ಮೇಲೆ ಏನಾಗುತ್ತದೆ?'' ಬೋಶಿ ಹೇಳಿದರು ''ಈ ಪ್ರಶ್ನೆಗೆ ನೀವೇ ಉತ್ತರ ಕೊಡಬೇಕು ಮಹಾರಾಜ್. ನಮ್ಮ ವಿಜ್ಞಾನದಲ್ಲಿ ಇದಕ್ಕೆ ಉತ್ತರವಿಲ್ಲ..''

## ಬಿಡುಗಡೆ

ಸ್ವಾಮಿ ವಿವೇಕಾನಂದರ ಆದರ್ಶಕ್ಕೆ ಅನುಗುಣವಾಗಿ ತಮ್ಮ ಜೀವನವನ್ನು, ಕೆಲಸಗಳನ್ನು ರೂಪಿಸಿಕೊಳ್ಳುವ ತಮ್ಮ ಯೋಜನೆ ಗಳನ್ನು ಕಾರ್ಯರೂಪಕ್ಕೆ ತರಲು ಬೋಶಿ ವ್ಯಾಕುಲರಾದರು. ವಿದೇಶಗಳಿಂದ ಹಿಂತಿರುಗಿದ ಮೇಲೆ ಈ ವಿಚಾರವಾಗಿ ಚರ್ಚಿ ಸಲು ಅವರು ಜೆ.ಸಿ.ಬೋಸ್‌ರ ಬಳಿ ಹೋದರು. ಜೆ.ಸಿ. ಬೋಸ್ ಈ ತರುಣ ವಿಜ್ಞಾನಿಯ ಮಾತುಗಳಿಗೆ ಹೆಚ್ಚು ಮಹತ್ವ ನೀಡಲಿಲ್ಲ.

ಅವರ ಕೈಕೆಳಗೆ ಇದ್ದುಕೊಂಡೇ ಸಸ್ಯವಿಜ್ಞಾನದಲ್ಲಿ ಕೃಷಿಯ ಅಭಿವೃದ್ಧಿಗೋಸ್ಕರ ಸಂಶೋಧನೆ ನಡೆಸುವ ಬೋಶಿಯ ಇಚ್ಛೆಯನ್ನು ಅವರು ತಿರಸ್ಕರಿಸಿದರು. ಈ ಹಿಂದೆ ಇನ್ನೂ ಕೆಲವು ಸಂದರ್ಭಗಳಲ್ಲಿ ಅವರು ತಮ್ಮ ಈ ಮೇಧಾವಿ ವಿದ್ಯಾರ್ಥಿಯ ನಮ್ರತೆ ಮತ್ತು ಬುದ್ಧಿಮತ್ತೆಗಳಿಗೆ ಬೆಲೆಕೊಡದೆ ನಡೆದುಕೊಂಡಿದ್ದರು. ತಮ್ಮ ಸಂಶೋಧನೆಗೆ ಸಂಬಂಧಿಸಿದ ಕೆಲವು ಪ್ರಬಂಧಗಳನ್ನು ಜೆ.ಸಿ. ಬೋಸ್ ಇಂಗ್ಲೆಂಡಿನ ರಾಯಲ್ ಸೊಸೈಟಿಗೆ ಕಳಿಸಲು ಸಿದ್ಧಪಡಿಸುವಂತೆ ಬೋಶಿಗೆ ಹೇಳಿದರು. ಇವನ್ನು ತಯಾರು ಮಾಡಲು ಬೋಶಿ ತಮ್ಮ ದಿನನಿತ್ಯದ ಕೆಲಸದ ನಡುವೆ ಒಂದು ನಿಮಿಷವನ್ನೂ ನಷ್ಟಮಾಡದೆ ಅವಿಶ್ರಾಂತವಾಗಿ ಒಂದು ವರ್ಷವೆಲ್ಲಾ ದುಡಿದಿದ್ದರು. ಈ ಸಂಶೋಧನೆಯ ವಿಚಾರ ಪತ್ರಿಕೆಯಲ್ಲಿ ಅಚ್ಚಾಗಿ ಬಂದಾಗ ಬೋಶಿಗೆ ಆಶ್ಚರ್ಯ ಕಾದಿತ್ತು. ಡಾ. ಜೆ.ಸಿ. ಬೋಸ್ ತಮ್ಮ ಹೆಸರಿನ ಜೊತೆ ಈ ಸಂಶೋಧನೆಗೆ ಯಾವ ರೀತಿಯ ಸಹಾಯವನ್ನೂ ಮಾಡದ ಮತ್ತೊಬ್ಬ ವಿದ್ಯಾರ್ಥಿಯ ಹೆಸರನ್ನು ಕೊಟ್ಟಿದ್ದರು. ಬೋಶಿಯ ಹೆಸರು ಎಲ್ಲೂ ಉಲ್ಲೇಖವಾಗಿರಲಿಲ್ಲ. ಬೋಶಿ ಮತ್ತೆ ಮತ್ತೆ ನೆನಪಿಸಿಕೊಂಡರು ಗೀತೆಯ ಆ ಶ್ಲೋಕವನ್ನು : 'ಕರ್ಮಣ್ಯೇವಾಧಿಕಾರಸ್ತೇ...' ಜೀವನದ ಇಂಥ ಪರೀಕ್ಷೆಗಳಲ್ಲಿ ಅವರಿಗೆ ಶಾಂತಿ ನೀಡುತ್ತಿದ್ದ ಉಪದೇಶವಿದು. ಈ ಎಲ್ಲಾ ವಿಚಾರಗಳನ್ನು ಕುರಿತು ಮುಂದೊಮ್ಮೆ ಮಾತನಾಡುವಾಗ ಬೋಶಿ ಹೇಳಿದ್ದರು, ''ಜೆ.ಸಿ. ಬೋಸ್‌ರವರು ಸ್ವಾಮಿ ವಿವೇಕಾನಂದರಲ್ಲವಲ್ಲಾ, ಹಾಗಾಗಿ ಅವರಿಂದ ಇನ್ನೇನನ್ನು ನಿರೀಕ್ಷಿಸುವುದು?''

ಜೆ.ಸಿ. ಬೋಸರಿಂದ ದೂರವಾಗಿ ಸ್ವತಂತ್ರರಾಗಲು ಬೋಶಿ ಸೇನ್ ಚಿಂತಿಸಲಾರಂಭಿಸಿದರು. ಅವರೊಂದಿಗಿನ ತಮ್ಮ ಹನ್ನೆರಡು ವರ್ಷಗಳ ಸಂಶೋಧನೆಯ ಜೀವನವನ್ನು ಕೊನೆಗೊಳಿಸುವ ತೀರ್ಮಾನಕ್ಕೆ ಬಂದಾಗ ಬೋಶಿಯ ಮನಸ್ಸು ದ್ವಂದ್ವಕ್ಕೆ ಒಳಗಾಯಿತು. 'ಕೈಯಲ್ಲಿ ಸರಿಯಾಗಿ ನಗದು ಹಣವಿಲ್ಲದೆ ಏನು ಸಂಶೋಧನೆ ಮಾಡುವೆ?' ಎಂದು ಸ್ನೇಹಿತರೂ ಹೇಳಲಾರಂಭಿಸಿದ್ದರು. ಕೊನೆಗೊಮ್ಮೆ ದೃಢ ನಿರ್ಧಾರಮಾಡಿ, ಬೋಶಿ ಈ ಮಹಾನ್ ವಿಜ್ಞಾನಿಯ ಹಿಡಿತದಿಂದ ಮುಕ್ತರಾಗಿ ಹೊರಬಂದರು.

**ಅಡುಗೆ ಕೋಣೆಯ ಲ್ಯಾಬ್:** ಬೋಶಿಯ ಮನಸ್ಸು ಉದ್ವೇಗದಿಂದ ತುಂಬಿತ್ತು. ಕೈಯಲ್ಲಿ ಹಣವಿರಲಿಲ್ಲ, ತನ್ನದೇ ಎನ್ನುವ ಜಾಗವಿರಲಿಲ್ಲ, ಇದುವರೆಗೂ ತನ್ನನ್ನು ಆವರಿಸಿಕೊಂಡಿದ್ದ ದೊಡ್ಡ ಆಶ್ರಯದಿಂದ ಹೊರಬಂದು ಬಯಲಲ್ಲಿ ನಿಂತಂತಾಯಿತು. ಜೀವನದ ಈ ರಣರಂಗದಲ್ಲಿ ಒಬ್ಬನೇ ನಿಂತು ಯುದ್ಧಮಾಡಬೇಕಾದ ಪರಿಸ್ಥಿತಿ. ಇಲ್ಲ, ಜೊತೆಗೆ ಇನ್ನೊಬ್ಬರಿದ್ದಾರೆ, — ಸ್ವಾಮಿ ವಿವೇಕಾನಂದರು. ತಮ್ಮ ಜೀವನದ ಇಂಥ ಸಂಕಟದ ಮುಹೂರ್ತಗಳಲ್ಲಿ ಬೋಶಿ ಪ್ರಾರ್ಥಿಸುತ್ತಿದ್ದುದ್ದು ಸ್ವಾಮಿ ವಿವೇಕಾನಂದರನ್ನು. ೪ನೇ ಜುಲೈ ೧೯೨೪ರಲ್ಲಿ ಬೋಶಿ ತಮ್ಮದೇ ಆದ ಸಣ್ಣ ಲ್ಯಾಬೊರೇಟರಿಯನ್ನು ಆರಂಭಿಸಿ ಅದಕ್ಕೆ '**ವಿವೇಕಾನಂದ ಲ್ಯಾಬೊರೇಟರಿ**' ಎಂದು ಹೆಸರಿಟ್ಟರು. ಆಗಸ್ಟ್ ೧೯೭೧ರಲ್ಲಿ ಬೋಶಿಯ ಶರೀರ ತ್ಯಾಗದ ನಂತರ ಅವರ ಕಾಗದ ಪತ್ರಗಳ ನಡುವೆ ಒಂದು ಪತ್ರ ಸಿಕ್ಕಿತು. ವಿವೇಕಾನಂದ ಲ್ಯಾಬನ್ನು ಆರಂಭಿಸುವ ಸಮಯದಲ್ಲಿ ತಮ್ಮ ಮನಸ್ಸಿನ ಹೋರಾಟವನ್ನು ತೋರಿಸಿಕೊಳ್ಳುತ್ತಾ ಶಕ್ತಿಗಾಗಿ ಧೈರ್ಯಕ್ಕಾಗಿ ಸ್ವಾಮೀಜಿಯ ಬಳಿ ಅವರು ಮಾಡಿದ ವ್ಯಾಕುಲ ಪ್ರಾರ್ಥನೆ ಇದು. ಅವರು ಬರೆಯುತ್ತಾರೆ: ''ಸ್ವಾಮೀಜಿ ಮಹಾರಾಜ್, ನಿಮ್ಮ ಹೆಸರಿನಿಂದಲೇ ಈ ಲ್ಯಾಬೊರೇಟರಿಯನ್ನು ಆರಂಭಿಸುವ ಸಾಹಸ ಮಾಡುತ್ತಿದ್ದೇನೆ. ನನ್ನಲ್ಲಿ ಎಷ್ಟು ಶಕ್ತಿ ಇದೆ ಎಂದು ನಿಮಗೆ ಗೊತ್ತು. ಗುರು ಸದಾನಂದರ ದಾರಿದೀಪ ನೀವು. ನಿಮ್ಮಲ್ಲಿ ನನ್ನ ಒಂದೇ ಪ್ರಾರ್ಥನೆ: ನಿಮ್ಮ ಆದರ್ಶವನ್ನು



ವಿವೇಕಾನಂದ ಲ್ಯಾಬೊರೇಟರಿ, ಆಲ್ಮೋರಾ

ಮುಂದಿಟ್ಟುಕೊಂಡು ಆರಂಭಿಸಿರುವ ಈ ಕೆಲಸ ಸಾರ್ಥಕವಾಗುವಂತೆ ಮಾಡಿ. ನನ್ನ ಯಾವುದೇ ಆಚರಣೆ ನಿಮ್ಮ ಹೆಸರಿಗೆ ಕಳಂಕವನ್ನುಂಟುಮಾಡದಿರಲು ನನ್ನ ಕೈಹಿಡಿದು ನಡೆಸಿ. ನಿಮ್ಮಲ್ಲಿ, ನಿಮ್ಮ ಎಲ್ಲದರಲ್ಲಿ ನನ್ನಲ್ಲಿ ಪ್ರೀತಿ ವಿಶ್ವಾಸ ಕೊಡಿ...'' ಇತಿ ಬೋಶಿ.

ಬಾಗ್‌ಬಜಾರಿನಲ್ಲಿ ನಂ. ೮, ಬೋಸ್‌ಪಾರಾ ಲೇನ್‌ನಲ್ಲಿರುವ ತಮ್ಮ ಆ ಹಳೆಯ ಬಾಡಿಗೆ ಮನೆಯ ಅಡಿಗೆ ಕೋಣೆಯಲ್ಲಿಯೇ ಬೋಶಿ ವಿವೇಕಾನಂದ ಲ್ಯಾಬೊರೇಟರಿಯನ್ನು ಆರಂಭಿಸಿದರು. ತಮ್ಮ ಅದಮ್ಯ ಸಾಹಸ ಮತ್ತು ವಿವೇಕಾನಂದರ ಕೃಪೆಯ ಮೇಲಿನ ಅಗಾಧ ವಿಶ್ವಾಸದಿಂದ ಬೋಶಿ ಅದನ್ನು ಆರಂಭಿಸಿದರು. ಅವರ ಗೆಳೆಯರು ಸ್ವಲ್ಪ ಆಶ್ಚರ್ಯದಿಂದಲೇ ಬೋಶಿಯನ್ನು ಗಮನಿಸುತ್ತಿದ್ದರು. ಅವರ ಸ್ನೇಹಪರಾಯಣತೆ, ನಕ್ಕುನಗಿಸುವ ಪ್ರವೃತ್ತಿ, ತೀಕ್ಷ್ಣ ವೈಜ್ಞಾನಿಕ ಬುದ್ಧಿಗಳು ಭಾರತ ಮತ್ತು ಪಾಶ್ಚಾತ್ಯ ದೇಶಗಳಲ್ಲಿ ಬಹಳ ಮಂದಿ ಸ್ನೇಹಿತರನ್ನು ಅವರತ್ತ ಆಕರ್ಷಿಸಿದ್ದವು. ತಮಗೆ ಸಣ್ಣಪುಟ್ಟ ಸಹಾಯ ಮಾಡಿದ ಜನರನ್ನೂ ಅವರು ಜೀವನವಿಡೀ ನೆನಪಿಟ್ಟುಕೊಂಡಿದ್ದರು. ಅವರಲ್ಲಿ ರಷ್ಯಾದ ಕಲಾವಿದ ನಿಕೋಲಾಸ್ ರೋರಿಚ್ಚರೂ ಒಬ್ಬರು. ಸ್ವಾಮಿ ವಿವೇಕಾನಂದರ ಅನುಯಾಯಿಗಳಾದ ಜೋಸಫೀನ್ ಮ್ಯಾಕ್ಲೌಡ್ ಮುಂತಾದವರು ಕೊನೆಯವರೆಗೂ ಬೋಶಿಯ ಬೆಂಬಲಿಗರಾಗಿ ನಿಂತರು. ಇಂಗ್ಲೆಂಡಿನ ರಾಯಲ್ ಸೊಸೈಟಿಯೂ ಬೋಶಿಗೆ ಹಣವನ್ನು ಕಳುಹಿಸಿತು. ಈ ಎಲ್ಲದರ ನಡುವೆ ಬೋಶಿ ಸ್ವಾಮೀಜಿಯ ಕೃಪಾಸ್ಪರ್ಶವನ್ನು

ಪ್ರತ್ಯಕ್ಷವಾಗಿ ಅನುಭವಿಸುತ್ತಾ ಧನ್ಯರಾದರು. ಆರಂಭದಲ್ಲಿ ಆ ಸಣ್ಣಮನೆಯಲ್ಲಿ ಹೇಗೋ ಗುದ್ದಾಡಿಕೊಂಡೇ ತಮ್ಮ ಕೆಲಸವನ್ನು ನಡೆಸಿಕೊಂಡು ಹೋಗಬೇಕಾಯಿತು. ಸಸ್ಯಗಳ ಸಂರಕ್ಷಣೆಗೆ ವಿಶಾಲವಾದ ಜಾಗ ಮತ್ತು ಬೆಳಕಿನ ಅಗತ್ಯವಿತ್ತು. ಪ್ರಯೋಗ ಮಾಡಲು ಅನುಕೂಲವಾದ ಮೇಜು, ಕುರ್ಚಿಗಳೂ ಇರಲಿಲ್ಲ. ಮೇಜಿನಂತೆ ಉಪಯೋಗಿಸಲು ಚಕ್ರಗಳಿರುವ ಎರಡು ದೊಡ್ಡ ಮರದ ಡಬ್ಬಿಗಳನ್ನು ಮಾಡಿಸಿದರು. ರಾತ್ರಿ ಸಂಶೋಧನೆಯ ಉಪಕರಣಗಳು ಡಬ್ಬಿಯ ಒಳಗೆ ಸೇರಿಕೊಳ್ಳುತ್ತಿದ್ದವು. ಡಬ್ಬಿ ಮಂಚವಾಗಿ ಮಾರ್ಪಾಡಾಗುತ್ತಿತ್ತು. ಮನೆಯ ಸಿಮೆಂಟಿನ ಅಂಗಳದಲ್ಲಿ ಬೇಕಾದ ಸಸ್ಯಗಳನ್ನು ಇಡುತ್ತಿದ್ದರು.

ಅಮೆರಿಕಾದಲ್ಲಿ ಪರಿಚಿತರಾದ ಕೃಷಿ ವಿಶ್ವವಿದ್ಯಾಲಯದ ಎಮ್‌ಹರ್ಸ್ಟ್ ಮತ್ತು ಆತನ ಶ್ರೀಮಂತ ಪತ್ನಿ ಡೊರೊಥಿ ಬೋಶಿಗೆ ಒಂದು ವರ್ಷ ಎಲ್ಲ ರೀತಿಯ ಸಹಾಯವನ್ನು ಮಾಡುವುದಕ್ಕೆ ಮುಂದೆ ಬಂದರು. ವಿವೇಕಾನಂದ ಲ್ಯಾಬೊರೇಟರಿಯ ಅಭ್ಯುದಯಕ್ಕೆ ಸಹಾಯಕರಾದವರಲ್ಲಿ ಮೊದಲಿಗರು ಈ ದಂಪತಿ. ಈ ಎಲ್ಲಾ ಸಹಾಯಗಳ ಬಲದಿಂದ ಬೋಶಿ ಸಸ್ಯಗಳ ಕೋಶಗಳ ಬೆಳವಣಿಗೆಯ ಮೇಲಿನ ತಮ್ಮ ಸಂಶೋಧನೆಯನ್ನು ಮುಂದುವರೆಸಿದರು. ಕ್ರಮೇಣ ಈ ಲ್ಯಾಬೊರೇಟರಿಯ ಹೆಸರು ಸುತ್ತಮುತ್ತಲೂ ಹರಡಿತು. ಬೋಶಿಯ ಬಳಿ ಕೆಲವು ಸಂಶೋಧನೆಯ ವಿದ್ಯಾರ್ಥಿಗಳೂ ಬಂದು ಸೇರಿದರು. ಇವರಲ್ಲಿ ಎಸ್.ಎಂ. ಸಿರ್‌ಕಾರ್ ಎನ್ನುವವರಿಗೆ ತಿಂಗಳಿಗೆ ೧೫೦ ರೂ ಸಂಬಳವನ್ನು ಕೊಟ್ಟು ಬೋಶಿ ತಮ್ಮ ಬಳಿಯೇ ಕೆಲಸಕ್ಕೆ ಇರಿಸಿಕೊಂಡರು. ಈ ಸಿರ್‌ಕಾರ್ ಬಹುಮುಂದೆ ಡಾ. ಜೆ.ಸಿ. ಬೋಸರ ಸಂಸ್ಥೆಯ ಡೈರೆಕ್ಟರ್ ಪದವಿಯನ್ನು ಪಡೆದಿದ್ದರು. ಈ ಆರಂಭದ ದಿನಗಳಲ್ಲಿ ನಡೆದ ಒಂದು ಘಟನೆಯನ್ನು ಬೋಶಿ ತುಂಬ ಮಜವಾಗಿ ಹೇಳುತ್ತಿದ್ದರು. ಒಂದು ದಿನ ಬೆಳಿಗ್ಗೆ ಅವರು ಅಡುಗೆ ಕೋಣೆಯ ಲ್ಯಾಬನ್ನು ತೆರೆದು ಕೆಲಸವನ್ನು ಆರಂಭಿಸಿದಾಗ ಒಬ್ಬ ವ್ಯಕ್ತಿ ಒಂದು ಪತ್ರವನ್ನು ಹಿಡಿದುಕೊಂಡು ಅವರ ಬಳಿಗೆ ಬಂದರು. ಪತ್ರವನ್ನು ಓದಿ ಬೋಶಿ ಗಾಬರಿಯಾದರು. ಆಗಿನ ಬ್ರಿಟಿಷ್ ಗವರ್ನರ್ ಆಗಿದ್ದ ಲಾರ್ಡ್ ಲಿಟ್ಟನ್ ಬೋಶಿಯ ಸಂಶೋಧನೆಗಳನ್ನು ತಿಳಿಯುವ ಇಚ್ಛೆಯನ್ನು ವ್ಯಕ್ತಪಡಿಸಿ ಪತ್ರವನ್ನು ಕಳಿಸಿದ್ದರು. ಬೋಶಿ ಕೆಲವು ಕ್ಷಣ ಬೆಪ್ಪಾಗಿ ಕುಳಿತರು. ಏನು ಹೇಳುವುದೆಂದು ತೋರಲಿಲ್ಲ. 'ಇದೊಂದು ಚಿಕ್ಕ ಅಡುಗೆ ಕೋಣೆ, ಗವರ್ನರ್ ಬಂದರೆ ಎಲ್ಲಿ ಕೂಡಿಸಲಿ? ಒಂದೇ ಒಂದು ಕುರ್ಚಿಯೂ ಇಲ್ಲ. ನನ್ನ ಸ್ಟೂಲನ್ನೇ ಅವರಿಗೆ ಕೊಟ್ಟು ಟ್ರಂಕಿನ ಮೇಲೆ ನಾನು ಕುಳಿತುಕೊಳ್ಳುತ್ತೇನೆ... ನಾನೇನು ಅವರನ್ನು ಕರೆಯಲು ಹೋಗುತ್ತಿಲ್ಲ; ಅವರೇ ಬರುತ್ತೇನೆ ಎನ್ನುತ್ತಿದ್ದಾರೆ. ಬಂದರೆ ಬರಲಿ, ಏನು ಇದೆಯೋ ಅದನ್ನೇ ಕೊಡುತ್ತೇನೆ..' ನಂತರ ತಮ್ಮನ್ನು ನಿಗ್ರಹಿಸಿಕೊಂಡು ಗವರ್ನರ್‌ಗೆ ಒಂದು ಪತ್ರ ಬರೆದರು: ''..ದಯವಿಟ್ಟು ಸಣ್ಣ ಕಾರಿನಲ್ಲಿ ಬನ್ನಿ. ನನ್ನ ಮನೆ ಒಂದು ಗಲ್ಲಿಯ ರಸ್ತೆಯಲ್ಲಿದೆ. ದೊಡ್ಡ ಕಾರು ಒಳಬರಲು ಜಾಗವಿಲ್ಲ'' ಎಂದು ಸೂಚಿಸುವುದನ್ನು ಮರೆಯಲಿಲ್ಲ. ಗವರ್ನರ್ ಬರುವ ಮೊದಲು ಕೆಲವರು ಪೋಲೀಸರು ಬೋಶಿಯ ಮನೆಯಲ್ಲಿ ಹಾಜರಾದರು. ಮನೆಯ ಒಳಹೊರಗನ್ನು ಪರೀಕ್ಷಿಸಿದ ನಂತರ ಅವರು ಬೋಶಿಯನ್ನು ಕೇಳಿದರು, ''ಈ ಸಣ್ಣ ಲ್ಯಾಬೊರೇಟರಿಯಲ್ಲಿ ಏನನ್ನು ನೋಡಲು ಗವರ್ನರ್ ಬರುತ್ತಿದ್ದಾರೆ?'' ಅದಕ್ಕೆ ಬೋಶಿ, ''ಈ ಪ್ರಶ್ನೆಯನ್ನು ನೀವು ಗವರ್ನರ್‌ಗೆ ಹಾಕಿದರೇ ಒಳ್ಳೆಯದು'' ಎಂದರು.

ಗೊತ್ತು ಮಾಡಿದ ದಿನದಲ್ಲಿ ಗವರ್ನರ್ ಬಂದು, ಬೋಶಿಯೊಡನೆ ಒಂದು ಗಂಟೆ ಕುಳಿತು ಅವರ ಸಂಶೋಧನೆಯನ್ನು ಕುರಿತು ಮಾತನಾಡಿದರು. ''ನನ್ನ ದೇಶದ ಜನರಿಗೆ ಬೇಕಾಗಿರುವುದು ಅನ್ನ. ಮೊದಲು ಅವರ ಹೊಟ್ಟೆ ತುಂಬಲಿ. ನಂತರ ಧರ್ಮವನ್ನು ಬೋಧಿಸಿ'' ಎಂಬ ಸ್ವಾಮಿ ವಿವೇಕಾನಂದರ ಮಾತುಗಳಿಂದ ಪ್ರಭಾವಿತರಾದ ಬೋಶಿ, ಕೃಷಿಯ ಅಭಿವೃದ್ಧಿಗೆ ಸಸ್ಯವಿಜ್ಞಾನವನ್ನು ಹೇಗೆ ಉಪಯೋಗಿಸಿಕೊಳ್ಳಬಹುದೆಂದು ಅಧ್ಯಯನ ಮಾಡುತ್ತಿದ್ದರು. ಹೊರಡುವ ಮೊದಲು ಲಾರ್ಡ್ ಲಿಟ್ಟನ್ ಸರ್ಕಾರದಿಂದ ಹಣದ ಸಹಾಯ ಮಾಡುವುದಾಗಿ ಅವರಿಗೆ ಹೇಳಿದರು. ''ಸರ್ಕಾರದ ಎದುರು ಕೈ ಚಾಚಲೆ?'' ಎಂದು ಬೋಶಿ ಯೋಚಿಸಿದರು. ಆದರೆ ಮರುಕ್ಷಣವೇ ಅನ್ನಿಸಿತು, ''ಇಲ್ಲ, ನಾನು ಆರಂಭದಲ್ಲಿಯೇ ವಿವೇಕಾನಂದರಿಗೆ ಹೇಳಿಬಿಟ್ಟಿದ್ದೇನೆ, ಅವರ ಕೃಪೆಯೇ ನನ್ನ ಸಹಾಯವೆಂದು...'' ಬೋಶಿ ವಿನಯದಿಂದ ಗವರ್ನರಿಗೆ ಧನ್ಯವಾದಗಳನ್ನು ತಿಳಿಸಿ ಹೇಳಿದರು, ''ಇಲ್ಲ, ತತ್ಕಾಲಕ್ಕೆ ನನಗೆ ಹಣಕಾಸಿನ ಅಗತ್ಯವಿಲ್ಲ...''

ಲಾರ್ಡ್ ಲಿಟ್ಟನ್ ಬೋಶಿಯ ಅತ್ಯಂತ ಆತ್ಮೀಯ ಸ್ನೇಹಿತರಾದರು. ಬೋಶಿ ಇಂಗ್ಲೆಂಡಿಗೆ ಹೋಗಿದ್ದಾಗ ಲಿಟ್ಟನ್ ಅವರನ್ನು ತಮ್ಮ ಮನೆಗೆ ಆಮಂತ್ರಿಸಿದರು. ಆ ದಿನ ಮಾತನಾಡುವಾಗ ಲಿಟ್ಟನ್ ಭಾವಾವೇಶದಿಂದ ಹೇಳಿದರು ''ನಿನಗೆ ನೆನಪಿದೆಯೆ? ಮೊದಲ ಬಾರಿ ನಾವಿಬ್ಬರೂ ಭೇಟಿಯಾದ ದಿನ?... ಭಾರತದಲ್ಲಿ ಅದೇ ಮೊದಲ ಬಾರಿ ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನಿಂದ ಪಡೆಯುವ ಆತ್ಮೀಯತೆಯನ್ನು ನಾನು ಅನುಭವಿಸಿದೆ.''

## ಆಲ್ಮೋರಾ

ಸಿಸ್ಟರ್ ಕ್ರಿಸ್ಟೀನ್ ಸ್ವಾಮಿ ವಿವೇಕಾನಂದರ ಶಿಷ್ಯೆ. ವಯಸ್ಸಾಗಿ ದುರ್ಬಲರಾಗಿದ್ದ ಅವರನ್ನು ಬೋಶಿ ತಮ್ಮ ಮನೆಗೆ ಕರೆತಂದು ನೋಡಿಕೊಳ್ಳುತ್ತಿದ್ದರು. ಕಲ್ಕತ್ತದ ಸುಡು ಬೇಸಿಗೆಯಲ್ಲಿ ಕ್ರಿಸ್ಟೀನ್ ತುಂಬ ಕಷ್ಟಪಡುತ್ತಿದ್ದುದನ್ನು ಕಂಡು ಜೋಸಿಫಿನ್ ಮ್ಯಾಕ್ಲೌಡ್ ಹಿಮಾಲಯದ ಆಲ್ಮೋರಾದಲ್ಲಿ ಒಂದು ಮನೆಯನ್ನು ನೋಡುವಂತೆ ಬೋಶಿಗೆ ಹೇಳಿದರು. ಲ್ಯಾಬೊರೇಟರಿ ಕೆಲಸ ದಿನದಿನಕ್ಕೆ ವೃದ್ಧಿಯಾಗುತ್ತಿತ್ತು. ಆಲ್ಮೋರಾ ಅದಕ್ಕೆ ಅತ್ಯಂತ ಉಪಯುಕ್ತ ಸ್ಥಳ. ಒಳ್ಳೆಯ ಹವಾಮಾನದಲ್ಲಿ ಸಸ್ಯಗಳನ್ನು ಬೆಳೆಸಿ ಸಂರಕ್ಷಿಸಲು ಜಾಗವೊಂದರ ಅಗತ್ಯವಿತ್ತು. ಸ್ವಾಮಿ ವಿವೇಕಾನಂದರ ಈ ಅನು



**ಕುಂದನ್ ಹೌಸ್, ಆಲ್ಮೋರಾ**

ಯಾಯಿಗಳ ಸಹಾಯದಿಂದಲೇ ಬೋಶಿ ಆಲ್ಮೋರಾದಲ್ಲಿ ಕುಂದನ್ ಹೌಸ್ ಎಂಬ ಮನೆಯನ್ನು ಬಾಡಿಗೆ ತೆಗೆದುಕೊಂಡರು. ದೊಡ್ಡ ಮನೆ ಹಾಗೂ ಸುತ್ತಲೂ ತೋಟವಿದ್ದು ಈ ಜಾಗ ಅತ್ಯಂತ ಮನೋಹರವಾಗಿತ್ತು. ೧೯೨೬ರಲ್ಲಿ ಕಲ್ಕತ್ತದ ಬಾಗ್‌ಬಜಾರಿನ ಮನೆಯಿಂದ ಲ್ಯಾಬೊರೇಟರಿಯನ್ನು ಸಂಪೂರ್ಣ ವಾಗಿ ಕುಂದನ್ ಹೌಸ್‌ಗೆ ಸ್ಥಳಾಂತರಿಸಲಾಯಿತು. ಸಿಸ್ಟರ್ ಕ್ರಿಸ್ಟೀನ್ ಆಲ್ಮೋರಾದ ಶಾಂತ ವಾತಾವರಣದಲ್ಲಿ ಪ್ರಫುಲ್ಲವಾಗಿ ಇರುತ್ತಿದ್ದರು. ಅವರ ಮನಸ್ಸು ಯಾವಾಗಲೂ ಧ್ಯಾನಮಗ್ನವಾಗಿರಲು ತವಕಿಸುತ್ತಿತ್ತು. ಈ ಸಮಯದಲ್ಲಿ ಬೋಶಿಗೆ ಗೆಟ್ರೂಡ್ ಎಮರ್‌ಸನ್ ಎಂಬ ಅಮೆರಿಕಾದ ಮಹಿಳೆಯೊಂದಿಗೆ ಪರಿಚಯವಾಯಿತು. ಈಕೆ ಭಾರತಪ್ರೇಮಿ. ಸಾಧು-ಸಂತರ ಬಗ್ಗೆ ಅಪಾರ ಗೌರವ ಉಳ್ಳವಳಾಗಿದ್ದಳು. ಚಿಕಾಗೋ ವಿಶ್ವವಿದ್ಯಾಲಯದಿಂದ ಡಿಗ್ರಿ ಪಡೆದಿದ್ದು, ಏಶಿಯಾ ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಬಹುಬಾರಿ ಭಾರತಕ್ಕೆ ಬಂದ ಗೆಟ್ರೂಡ್, ತನ್ನ ಪತ್ರಿಕೆಯಲ್ಲಿ ಭಾರತದಲ್ಲಿ ವಿಭಿನ್ನ ಸಂಪ್ರದಾಯದ ಜನಗಳನ್ನು ಕುರಿತು ಲೇಖನಗಳನ್ನು ಬರೆಯುತ್ತಿದ್ದಳು. ಬೋಶಿ ಸಂನ್ಯಾಸಿಯಾಗುತ್ತಾರೆಂದು ಆಶಿಸಿದ್ದ ಸಿಸ್ಟರ್ ಕ್ರಿಸ್ಟೀನ್ ಮೊದಮೊದಲು ಅವರಿಬ್ಬರ ನಡುವಿನ ಒಡನಾಟವನ್ನು ಕಂಡು ರೇಗಿಕೊಂಡರೂ ಗೆಟ್ರೂಡಳಲ್ಲಿದ್ದ ಆಧ್ಯಾತ್ಮಿಕ ಒಲವನ್ನು, ನಮ್ರತೆಯನ್ನು ಗುರುತಿಸಿದ ಮೇಲೆ ಅವರ ಮನಸ್ಸು ನಿಧಾನವಾಗಿ ಕರಗಿತು. ಆಲ್ಮೋರಾದ ರಾಮಕೃಷ್ಣ ಕುಟೀರದ ಹಿರಿಯ ಸಂನ್ಯಾಸಿಗಳನೇಕರು ಆಗಾಗ ಕುಂದನ್ ಹೌಸ್‌ಗೆ ಬಂದು ಕ್ರಿಸ್ಟೀನ್ ಮತ್ತು ಬೋಶಿಯೊಡನೆ ಟೀ ಕುಡಿದು ಹೋಗುತ್ತಿದ್ದರು. ೧೯೨೮ರಲ್ಲಿ ಆರೋಗ್ಯ ತೀರ ಹಾಳಾಗಿದ್ದುದರಿಂದ ಕ್ರಿಸ್ಟೀನ್ ಅಮೆರಿಕಾಗೆ ಹಿಂದಿರುಗಿದರು. ೧೯೩೦ರ ಮಾರ್ಚ್ ೨೬ರಂದು ಅವರು ಅಲ್ಲೇ ತೀರಿಕೊಂಡರು. ೧೯೩೨ರ ನವೆಂಬರ್ ೨ರಂದು ಬೋಶಿ ಸೇನ್ ಗೆಟ್ರೂಡ್ ಎಮರ್‌ಸನ್‌ಳನ್ನು ವಿವಾಹವಾದರು. ರಾಮಕೃಷ್ಣ ಮಠದ ಅನೇಕ ಸಂನ್ಯಾಸಿಗಳು ಈ ಬಗ್ಗೆ ಅಸಮ್ಮತಿ ಮತ್ತು ವಿಸ್ಮಯಗಳನ್ನು ವ್ಯಕ್ತಪಡಿಸಿದರೂ, ಪ್ರಾಚೀನ ಋಷಿಗಳಂತೆ ಮನೋಭಾವವಿದ್ದ ಈ ದಂಪತಿಗಳನ್ನು ಕೊನೆಗೂ ಮೆಚ್ಚದೆ ಇರಲಾಗಲಿಲ್ಲ. *(ಮುಂದುವರಿಯುವುದು)*

## ಆಧ್ಯಾತ್ಮಿಕ ಜೀವನದಲ್ಲಿ ಪ್ರಾಮಾಣಿಕತೆ



(ಸ್ವಾಮಿ ಶಿವಾನಂದರ ಉಪದೇಶಗಳು)

ಶಿಷ್ಯ : ''ಧ್ಯಾನ ಮಾಡುವಾಗ ಕೆಲವೊಮ್ಮೆ ಸುಲಭವಾಗಿ ಮನಸ್ಸು ಸ್ಥಿರವಾಗುವುದು. ಇತರ ದಿನಗಳಲ್ಲಿ ಅದು ಸಾವಿರ ವಿಷಯಗಳತ್ತ ಹರಿದು, ಅತ್ಯಂತ ಚಂಚಲವಾಗುವುದು. ಅಂಥ ವೇಳೆ ಏನು ಮಾಡಿದರೂ ಮನಸ್ಸನ್ನು ಹತೋಟಿಗೆ ತರಲಾಗುವುದಿಲ್ಲ. ಹೀಗೇಕಾಗುತ್ತದೆ, ಮಹಾರಾಜ್?''

ಸ್ವಾಮೀಜಿ: ''ಆರಂಭದಲ್ಲಿ ಎಲ್ಲರಿಗೂ ಹೀಗಾಗುತ್ತದೆ. ಅದಕ್ಕಾಗಿ ಕೊರಗಬೇಕಿಲ್ಲ. ನೀನು ಗೀತೆಯಲ್ಲಿ ಓದಿಲ್ಲವೆ? ಅರ್ಜುನನು ಕೃಷ್ಣನಿಗೆ ಕೇಳುತ್ತಾನೆ, 'ಮನಸ್ಸು ಚಂಚಲವೂ ಅಸ್ಥಿರವೂ ಆಗಿರುವಾಗ ಅದನ್ನು ನಿಗ್ರಹಿಸುವುದು ವಾಯುವಿನಂತೆ ಅತ್ಯಂತ ಕಠಿಣವಾಗಿದೆಯಲ್ಲ?' ಎಂದು. ಅದಕ್ಕೆ ಕೃಷ್ಣನ ಉತ್ತರ: 'ನಿಸ್ಸಂದೇಹವಾಗಿಯೂ ಅದು ಕಠಿಣ, ಓ ಅರ್ಜುನ! ಅಂಥ ಮನಸ್ಸನ್ನು ಅಭ್ಯಾಸದಿಂದಲೂ ವೈರಾಗ್ಯದಿಂದಲೂ ನಿಗ್ರಹಿಸಬೇಕು.' ಮನಸ್ಸು ಸ್ಥಿರವಾಗದಿದ್ದರೂ ಸರಿ, ಜಪ-ಧ್ಯಾನಗಳಲ್ಲಿ ನಿರಾಸಕ್ತಿಯುಂಟಾದರೂ ಸರಿ, ಅವುಗಳನ್ನು ನಿಲ್ಲಿಸಬೇಡ. ಅದಕ್ಕೆ ಬದಲಾಗಿ ನಿನ್ನ ಪ್ರಯತ್ನವನ್ನು ಹೆಚ್ಚಿಸು, ಬಿಟ್ಟುಕೊಡಬೇಡ. ನಿನ್ನ ಮನಸ್ಸು ಎಲ್ಲಿಗೆ ಅಲೆದಾಡುತ್ತಿದೆ ಎಂದು ಗಮನಿಸು. ಚಂಚಲವಾದ ಮನಸ್ಸು ವಿಷಯ-ವಸ್ತುಗಳ ಆಲೋಚನೆಗಳಲ್ಲಿ ಮೈಮರೆಯದ ಹಾಗೆ ಎಚ್ಚರ ವಹಿಸು. ಮತ್ತೆ ಮತ್ತೆ ಮನಸ್ಸನ್ನು ಎಳೆದು ತಂದು ಧ್ಯಾನ ಮಾಡುವ ವಸ್ತುವಿನ ಕಡೆಗೆ ಹರಿಸು. ನಿನ್ನ ಪ್ರಯತ್ನದಿಂದಲೇ ನಿನಗಿದು ಸಾಧ್ಯವಾಗದೆ ಹೋದರೆ, ಶ್ರೀರಾಮಕೃಷ್ಣರ ಮುಂದೆ ಹೋಗಿ ಅತ್ತು, ಕರೆದು ಪ್ರಾರ್ಥಿಸು. ಶ್ರೀರಾಮಕೃಷ್ಣರು ನನಗೆ ಒಂದು ಸಲ ಹೇಳಿದರು, 'ದೇವರ ಮುಂದೆ ಅತ್ತುಬಿಟ್ಟರೆ, ಆಗ ನಿನ್ನ ಮನಸ್ಸಿನ ಮಲಿನತೆಯೆಲ್ಲವೂ ತೊಳೆದು ಹೋಗುವುದು' ಎಂದು. ಅದನ್ನು ಕೇಳಿದ ನಂತರ ನಾನು ಪಂಚವಟಿಗೆ ಧ್ಯಾನ ಮಾಡಲು ಹೋದಾಗ ನನಗೆ ಜೋರಾಗಿ ಅಳು ಬಂತು. ಶ್ರೀರಾಮಕೃಷ್ಣರ ಮಾತುಗಳು ಬರೀ ಮಾತುಗಳಲ್ಲ, ಅವು ನಮ್ಮ ಆತ್ಮವನ್ನೇ ಎಚ್ಚರಿಸಿಬಿಡುತ್ತವೆ. ನಮ್ಮ ಗುರು ಮಹಾರಾಜರು 'ಅತ್ಯಂತ ಪರಿಶುದ್ಧರು, ಸ್ವಲ್ಪವೂ ಮಾಲಿನ್ಯದ ಸ್ಪರ್ಶವಾಗದವರು.' ಅವರನ್ನು ಕುರಿತು ಧ್ಯಾನಿಸುವುದೇ ಮನಸ್ಸನ್ನು ಹತೋಟಿಗೆ ತರಲು ಅತ್ಯುತ್ತಮವಾದ ಮಾರ್ಗ.''

*('InThe Divine Realm' ಗ್ರಂಥದಿಂದ, ಪು.೧೯೩-೯೪)*